ಶ್ರೀ ತಿಪ್ಪೇಸ್ವಾಮಿ: ನಾನೂ ಸಹ ಹೇಳುತ್ತೇನೆ.

ಉಪಾಧ್ಯಕ್ಷರು: ಶ್ರೀ ಯಡಿಯೂರಪ್ಪನವರ ಪ್ರಶ್ನೆಗೆ ಸಮಯ ಕೇಳಿದ್ದಾರೆ.

ವಿಷಯ: ದ.ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸಮುದ್ರ ಕೊರೆತ ನಿವಾರಣೆಗೆ ತಡೆಗೋಡೆ.

215 (1332)

ಶ್ರೀ ವಸಂತ ವಿ.ಸಾಲಿಯಾನ (ಕಾಪು): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96, 1996-97 ಮತ್ತು 1997-98ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸಮುದ್ರ ಕೊರೆತ ತಡೆಗೋಡೆ ರಚನೆಗಾಗಿ ನಿಗದಿಪಡಿಸಿದ ಹಣವೆಷ್ಟು?

ಆ) ಇವುಗಳಲ್ಲಿ ಖರ್ಚು ಮಾಡಲಾದ ಹಣವೆಷ್ಟು, ಕಾಮಗಾರಿ ನಡೆಸಿದ ಗುತ್ತಿಗೆದಾರರಿಗೆ ಪಾವತಿ ಮಾಡಬೇಕಾದ ಬಾಕಿಯಿರುವ ಹಣವೆಷ್ಟು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಅ) 1995-96, 1996-97 ಮತ್ತು 1997-98ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸಮುದ್ರ ಕೊರೆತ ತಡೆಗೋಡೆ ರಚನೆಗಾಗಿ ಈ ಕೆಳಕಂಡಂತೆ ಹಣವನ್ನು ಆಯವ್ಯಯದಲ್ಲಿ ನಿಗದಿಪಡಿಸಲಾಗಿದೆ.

(ಲಕ್ಷ ರೂ.ಗಳಲ್ಲಿ)

	95-96	96-97	97-98
ದಕ್ಷಿಣ ಕನ್ನಡ	75.30	59.92	47.30
ಉಡುಪಿ	261.77	296.60	182.70
ಉತ್ತರ ಕನ್ನಡ	350.81	356.52	280.00

ಆ) ಇವುಗಳಲ್ಲಿ ಖರ್ಚು ಮಾಡಿದ ಹಣ ಈ ಕೆಳಕಂಡಂತಿದೆ (ಲಕ್ಷ ರೂ.ಗಳಲ್ಲಿ)

	95-96	96-97	97-98
ದಕ್ಷಿಣ ಕನ್ನಡ	102.77	47.29	16.75
ಉಡುಪಿ	288.68	328.57	355.05
ಉತ್ತರ ಕನ್ನಡ	144.99	288.48	240.79

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಸಂಬಂಧಿಸಿದ ಕಾಮಗಾರಿಗಳ ಗುತ್ತಿಗೆದಾರರಿಗೆ ದಿನಾಂಕ: 1-4-98ರಂತೆ ರೂ. 196.75 ಲಕ್ಷಗಳ ಬಾಕಿ ಇದೆ. ಇದಲ್ಲದೆ 1997ನೇ ಸಾಲಿನಲ್ಲಿ ತುರ್ತು ಸಮುದ್ರ ಕೊರೆತ ತಡೆಗೋಡೆ ಕಾಮಗಾರಿಗಳ ಬಾಬ್ತು 465.432 ಲಕ್ಷ ರೂ.ಗಳ ಬಾಕಿ ಇದೆ.

ಉತ್ತರ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಕಾಮಗಾರಿಗಳ ಗುತ್ತಿಗೆದಾರರಿಗೆ ಬಾಕಿ ಇರುವ ಮೊತ್ತ 184.00 ಲಕ್ಷ ರೂ.ಗಳು.

ಶ್ರೀ ವಸಂತ ವಿ.ಸಾಲಿಯಾನ: ಉತ್ತರ ಕೊಟ್ಟಿದ್ದಾರೆ. ಸಮುದ್ರದ ಕೊರೆತಕ್ಕೆ ಉತ್ತರ ಕನ್ನಡ, ದಕ್ಷಣ ಕನ್ನಡ, ಉಡುಪಿ ಜಿಲ್ಲೆಗಳಿಗೆ ಎಷ್ಟು ಹಣವನ್ನು ನಿಗದಿಪಡಿಸಿದ್ದೀರಿ ಎಂದು ಕೇಳಿದ್ದೆ, ಅದಕ್ಕೆ ಅಂಕಿ-ಅಂಶ ಕೊಟ್ಟಿದ್ದಾರೆ, ಎಷ್ಟು ಖರ್ಚು ಮಾಡಿದ್ದೀರಿ ಎಂಬುದಕ್ಕೂ ಅಂಕಿ-ಅಂಶ ಕೊಟ್ಟಿದ್ದಾರೆ. ಸಮುದ್ರ ಕೊರೆತದಲ್ಲಿ ಎರಡು ವಿಧಗಳಿವೆ. ರೆಗ್ಯುಲರ್ ಟೆಂಡರ್ ವರ್ಕ್, ತುರ್ತು ಕಾಮಗಾರಿ ವರ್ಕ್. ಇದರಲ್ಲಿ 1995ನೇ ಇಸವಿಯಿಂದ ತುರ್ತು ಕಾಮಗಾರಿ ನಡೆದ ಕಾಮಗಾರಿಗಳಿಗೆ ಸುಮಾರು 465 ಲಕ್ಷ ರೂಪಾಯಿ ಬಾಕಿ ಇದೆ; ಅದರಲ್ಲಿ ಪ್ರಮುಖವಾದ ತುರ್ತು ಕಾಮಗಾರಿ ಯಾವುದಕ್ಕೆ ಮಾಡುತ್ತಾರೆಂದರೆ, ಮನೆ, ಜಮೀನು ಹೋದ ಸಂದರ್ಭದಲ್ಲಿ ಡಿಸಿಯವರು ತುರ್ತು ಕಾಮಗಾರಿಗಳನ್ನು ನಡೆಸಿದರು. 95ನೇ ಇಸವಿಯಿಂದ ಈವರೆಗೆ ತುರ್ತು ಕಾಮಗಾರಿಗಳು ನಡೆದ ಯಾವುದೇ ಕಾಮಗಾರಿಗಳಿಗೂ ಹಣ ಪಾವತಿಯಾಗಿಲ್ಲ. ಅದೇ ರೀತಿಯಲ್ಲಿ ರೆಗ್ಯುಲರ್ ವರ್ಕ್‌ಗೆ ಸುಮಾರು 196 ಲಕ್ಷ ರೂಪಾಯಿ ಬಾಕಿ ಇದೆ. ಅದೇ ರೀತಿ, ಉತ್ತರ ಕನ್ನಡ, ಜಿಲ್ಲೆಯಲ್ಲಿ ರೆಗ್ಯುಲರ್ ವರ್ಕ್ ಏನಿದೆ ಅದಕ್ಕೆ 194 ಲಕ್ಷ ರೂಪಾಯಿ ಬಾಕಿ ಇದೆ. ಈ ಹಣವನ್ನು ಪಾವತಿ ಮಾಡಲು ತಮ್ಮ ಬಜೆಟ್‌ನಲ್ಲಿ ಹಣ ಇಡಲಾಗಿದೆಯೇ? ಎರಡನೆಯದಾಗಿ, ಈ ಹಣವನ್ನು ಯಾವಾಗ ಪಾವತಿ ಮಾಡುತ್ತೀರಿ? ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಿಗೆ ಇನ್ನು ಮುಂದೆ ಯಾವುದೇ ಒಬ್ಬ ಗುತ್ತಿಗೆದಾರನೂ ಕೆಲಸ ಮಾಡುವುದಿಲ್ಲವೆನ್ನುವ ಹಂತಕ್ಕೆ ಬಂದಿದ್ದಾರೆ. ತುರ್ತು ಕಾಮಗಾರಿ ಸಂದರ್ಭದಲ್ಲಿ ಕೆಲಸ ಮಾಡುವ ಕಾಮಗಾರಿಗಳಿಗೆ ಗುತ್ತಿಗೆದಾರರು ಬರುತ್ತಿಲ್ಲ. ಅಂಥ ಪರಿಸ್ಥಿತಿಯಲ್ಲಿ ನಮಗೆ ಜನರು ಕಲ್ಲು ಹೊಡೆಯುವ ಪರಿಸ್ಥಿತಿ ನಿರ್ಮಾಣವಾಗಿದೆ. ದಯವಿಟ್ಟು ತಾವು ಈ ಹಣವನ್ನು ಯಾವಾಗ ಪಾವತಿ ಮಾಡುತ್ತೀರಿ?

ಉಪಾಧ್ಯಕ್ಷರು: ಸಂಕ್ಷಿಪ್ತವಾಗಿ ಕೇಳಿ. ಭಾಷಣ ಮಾಡಿದರೆ ಹೇಗೆ?

ಶ್ರೀ ವಸಂತ ವಿ.ಸಾಲಿಯಾನ: ಬಾಕಿ ಉಳಿದಿರುವ ಕಾಮಗಾರಿಗಳನ್ನು ಯಾವಾಗ ಮುಗಿಸುತ್ತೀರಿ? ಬಾಕಿ ಉಳಿದಿರುವ ಹಣವನ್ನು ಯಾವಾಗ ಪಾವತಿ ಮಾಡುತ್ತೀರಿ?

ಶ್ರೀ ತಿಪ್ಪೇಸ್ವಾಮಿ: 95-96, 96-97, 97-98ನೇ ಸಾಲಿನಲ್ಲಿ ಹಿಂದೆಲ್ಲಾ ಸಮುದ್ರ

ಕೊರೆತಕ್ಕೆ ಅರ್ಜೆಂಟ್ ಕೆಲಸಗಳನ್ನು ಕೈಗೆತ್ತಿಕೊಳ್ಳಲು ಡಿಸಿಯವರು ಹಣ ತೊಡಗಿಸುತ್ತಿದ್ದರು. ಆದ್ದರಿಂದ, ನಾವು ಬಜೆಟ್‌ನಲ್ಲಿ ಇದಕ್ಕೆ ಹಣ ಮೀಸಲಿಡುತ್ತಿರಲಿಲ್ಲ. 95-96, 97-98, ರಿಂದೀಚೆಗೆ ಡಿಸಿಯವರು ನಾವು ಕೊಡುವುದಿಲ್ಲ, ಸಣ್ಣ ನೀರಾವರಿ ಇಲಾಖೆಯವರೇ ಕೊಡಬೇಕೆಂದಿದ್ದರಿಂದ, ಈಗ ಬಿಲ್‌ಗಳು ಪೆಂಡಿಂಗ್ ಇವೆ. ಹಿಂದೆ ಸದನದಲ್ಲೂ ಸಹ ತುರ್ತು ಕಾಮಗಾರಿಗೆ ಹೋದ ವರ್ಷವೇನು ಸಮುದ್ರ ಕೊರೆತಕ್ಕೆ ಆಗಿರುವ ಹಣ 5 ಕೋಟಿ ರೂಪಾಯಿ ಇತ್ತೋ ಅದನ್ನು ನಾನು ಕೊಡುತ್ತೇನೆನ್ನುವ ಮಾತನ್ನು ಒಪ್ಪಿಕೊಂಡಿದ್ದೇನೆ. ಸುಮಾರು 5-6 $^{1}/_{2}$ ಕೋಟಿ ರೂಪಾಯಿಗಳ ಪೆಂಡಿಂಗ್ ಬಿಲ್ ಇದೆ. ಇವತ್ತು ನಾನು ಅರ್ಥ ಸಚಿವರೊಡನೆ ಸಮಾಲೋಚನೆ ಮಾಡಿದ್ದೇನೆ. ತುರ್ತು ಕಾಮಗಾರಿಗೆ ಹಣ ಕೊಡುತ್ತೇನೆಂದು ಹೇಳಿದ್ದಾರೆ. ಅವರು ಕೊಟ್ಟ ತಕ್ಷಣ ನಾನು ಸಮುದ್ರ ಕೊರೆತಕ್ಕೆ ಈ ವರ್ಷದ ಬಜೆಟ್‌ನಲ್ಲಿ ಹಣ ಮೀಸಲಿಡಬೇಕು ಎಂದುಕೊಂಡಿದ್ದೇನೆ. ಹಿಂದೆ 3 ವರ್ಷಗಳಲ್ಲಿ ತೊಂದರೆಯಾಗಿ ಅಂದರೆ ಡಿಸಿಯವರು ಕೊಡುತ್ತಿರುವ ಹಣ ಕೊಡದಿದ್ದರಿಂದ, ಅದಕ್ಕೆ ಬಜೆಟ್‌ನಲ್ಲಿ ಹಣ ತೊಡಗಿಸದಿದ್ದರಿಂದ, ಇಂಥ ಸಂಕಷ್ಟಕ್ಕೆ ಗುರಿಯಾಗಿದ್ದಾರೆ, ಇನ್ನು ಮುಂದೆ ಅಂಥ ಸಂಕಷ್ಟಕ್ಕೆ ಗುರಿಯಾಗದಂತೆ ಮುನ್ನೆಚ್ಚರಿಕೆ ಕ್ರಮ ವಹಿಸುತ್ತೇನೆ, ಹಿಂದೆ ನಿಂತಿರುವ ಬಿಲ್ಲುಗಳನ್ನೂ ಸಹ ಅರ್ಥ ಸಚಿವರೊಡನೆ ಮಾತನಾಡಿ ಹಣ ತೊಡಗಿಸುವುದಕ್ಕೆ ಮುಂದೆ ವ್ಯವಸ್ಥೆ ಮಾಡುತ್ತೇನೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲು ಬಯಸುತ್ತೇನೆ.

ಶ್ರೀ ವಸಂತ ವಿ.ಸಾಲಿಯಾನ: ತುರ್ತು ಕಾಮಗಾರಿಗಳು ಏನು ನಡೆದಿವೆ, ಅದರ ಬಗ್ಗೆ ಸರ್ಕಾರಕ್ಕೆ ರಿಪೋರ್ಟ್ ಬಂದಿದೆಯೇ? ಏಕೆಂದರೆ, ಡಿಸಿಯವರು ಸರ್ಕಾರಕ್ಕೆ ಕಳುಹಿಸಿದ್ದಾರೆಯೇ? ಸಂಶಯವಿದೆ. ಏಕೆಂದರೆ, ಸರ್ಕಾರಕ್ಕೆ ಕಳುಹಿಸಿದ್ದರೆ, ತಾವು ಸ್ವಲ್ಪಸ್ವಲ್ಪವಾದರೂ ಅದನ್ನು ಪಾವತಿ ಮಾಡಬೇಕಾಗಿತ್ತು. ನನಗೆ ಗೊತ್ತಿದ್ದ ಹಾಗೆ, 3-4 ವರ್ಷಗಳಿಂದ ಡಿಸಿಯವರ ಆದೇಶದ ಮೇರೆಗೆ ಕೆಲಸ ಮಾಡಿರುವ ತುರ್ತು ಕಾಮಗಾರಿಗಳಿಗೆ ಎಷ್ಟೋಕೋಟಿ ರೂಪಾಯಿ ಬಾಕಿ ಇದೆ, ಅದನ್ನು ಯಾವಾಗ ಪಾವತಿ ಮಾಡುತ್ತೀರಿ? ಹೇಗೆ ಪಾವತಿ ಮಾಡುತ್ತೀರಿ?

ಉಪಾಧ್ಯಕ್ಷರು: 1 ಗಂಟೆಯಾಯಿತು.

ಶ್ರೀ ಯು.ಆರ್.ಸಭಾಪತಿ: ಪ್ರಶ್ನೆ ಕೇಳಿದರೂ ಅವಕಾಶ ಕೊಡದಿದ್ದರೆ ಹೇಗೆ? ಇದು ಗಂಭೀರವಾದ ವಿಷಯ.

(ಗೊಂದಲ)

ಉಪಾಧ್ಯಕ್ಷರು: ತಾವು, ಹೇಳುವುದನ್ನು ಕೇಳಬೇಕು. ನೀವು ಹೇಳಿದ ಹಾಗೆ ಸದನವನ್ನು ನಡೆಸುವುದಕ್ಕಾಗುವುದಿಲ್ಲ. ಈ ರೀತಿ ವರ್ತನೆ ಮಾಡುವುದು ಸರಿಯಲ್ಲ.

ನೀವು ಮಾತನಾಡುವುದು ರೆಕಾರ್ಡಿಗೆ ಹೋಗುವುದಿಲ್ಲ. ಇದು ಒಳ್ಳೆಯದಲ್ಲ. ಒಂದು ಗಂಟೆಗೆ ಮುಗಿಯಬೇಕೆಂದು ನಾನು ಮೊದಲೇ ಹೇಳಿದ್ದೇನೆ, ನೀವು ಈ ರೀತಿ ಮಾಡಿದರೆ ನಿನ್ನೆ ಹಾಗೆ ಶೂನ್ಯವೇಳೆ, ಪ್ರಶ್ನೋತ್ತರವನ್ನು ಬಂದ್ ಮಾಡಬೇಕಾಗುತ್ತದೆ. ಈ ರೀತಿ ಮಾತನಾಡಿದರೆ ಒಳ್ಳೆಯದಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಕಳೆದ ಸಲ ನಾನು ಸೌತ್ ಕೆನರಾಗೆ ಹೋಗಿ ಬಂದಾಗ, ಈ ಪ್ರಶ್ನೆಯನ್ನು ಎತ್ತಿದ್ದೆ. ಆಗ ತಾವು ಒಂದು ಯೋಜನೆಯನ್ನೂ ಕೂಡ ನಾನು ತಯಾರು ಮಾಡುತ್ತಿದ್ದೇನೆ, ವರ್ಲ್ಡ್‌ಬ್ಯಾಂಕ್‌ನಿಂದ ಹಣ ತೆಗೆದುಕೊಂಡು ಸಹಾಯ ಮಾಡುತ್ತೇನೆಂದೂ ಹೇಳಿದ್ದಿರಿ. ಏನು ಕೆಲಸವಾಗಿದೆ ಅದಕ್ಕಾದರೂ ಹಣ ಒದಗಿಸುವುದು ಮಾಡಬೇಕು. ನೀವು ನ್ಯಾಚುರಲ್ ಕ್ಯಲಾಮಿಟಿ ಫಂಡ್‌ನಿಂದಲಾದರೂ ಕೊಡಿಸಿ ಅಥವಾ ಫೈನಾನ್ಸ್ ಮಿನಿಸ್ಟರ್‌ರವರಿಂದಲಾದರೂ ಎಕ್ಸ್‌ಟ್ರಾ ಬಜೆಟ್ ತೆಗೆದುಕೊಂಡಾದರೂ ಮಾಡಿ. ಮಾಡದೇ ಹೋದರೆ ಮುಂದಿನ ಕೆಲಸಗಳಾವುವೂ ನಡೆಯುವುದಿಲ್ಲ, 3-3 ವರ್ಷಗಳು ಕೆಲಸ ಮಾಡಿ, ಅಲ್ಲಿಗೆ ನಿಂತುಹೋದರೆ ಪ್ರಾಬ್ಲಂ ಆಗುತ್ತದೆ. ಪ್ರಯತ್ನಿಸುತ್ತೇನೆಂದು ಹೇಳಿದ್ದೀರಿ, ಎಷ್ಟು ದಿವಸಗಳಲ್ಲಿ ಅದನ್ನು ಮಾಡಿಸಿಕೊಡುತ್ತೀರೆಂಬ ಬಗ್ಗೆ ಹೇಳಿ.

ಶ್ರೀ ತಿಪ್ಪೇಸ್ವಾಮಿ: ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ನಾನು ಆಗಲೇ ನಮ್ಮ ಅರ್ಥ ಸಚಿವರೊಡನೆ ಮಾತನಾಡಿದ್ದೇನೆ. ಅವರೂ ಸಹ ಏನು 5 ಕೋಟಿ ರೂಪಾಯಿ ಇದೆಯೋ ಅದಕ್ಕೆ ಹಣ ತೊಡಗಿಸುವುದಕ್ಕೆ ಆಶ್ವಾಸನೆ ಕೊಟ್ಟಿದ್ದಾರೆ. ಮೊನ್ನೆಯೇ ಕೊಡುತ್ತೇನೆಂದು ಹೇಳಿದ್ದರು, ಸಧ್ಯಕ್ಕೆ ತೊಂದರೆಯಾಗಿರುವುದರಿಂದ, ಕೆಲವೇ ದಿನಗಳಲ್ಲಿ ಆದಷ್ಟು ಬೇಗ ವ್ಯವಸ್ಥೆ ಮಾಡಿಸಿಕೊಡುತ್ತೇನೆ.

ವಿಷಯ: ಗುಳೇದಗುಡ್ಡದ ಅಸಂಗಿ ಪಂಪ್ ಹೌಸ್

216 (1210)

ಶ್ರೀ ರಾಜಶೇಖರ ವಿ.ಶಿಲವಂತ (ಗುಳೇದಗುಡ್ಡ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಳೇದಗುಡ್ಡ ನಗರಕ್ಕೆ ನೀರು ಸರಬರಾಜು ಮಾಡುವ ಅಸಂಗಿ ಪಂಪ್‌ಹೌಸ್‌ಗೆ ಪ್ರತ್ಯೇಕ ವಿದ್ಯುತ್ ತಂತಿ ಹಾಕುವ ಪ್ರಸ್ತಾವನೆ ಸರ್ಕಾರದವರ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಈ ಕಾರ್ಯವನ್ನು ಎಂದು ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಶರಣ ಬಸಪ್ಪ ದರ್ಶಾನಾಪುರ್ (ಇಂಧನ ರಾಜ್ಯ ಸಚಿವರು):

ಅ) ಹೌದು.